## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-4177/2023

C.W.:-10

P.W.:-4

| | |
|---|---|
| ಸಾಕ್ಷಿದಾರನ ಹೆಸರು | ಸಿದ್ದಪ್ಪ ನಾಯಿಕ |
| ತಂದೆಯ ಹೆಸರು | ಮಹಾದೇವ |
| ವಯಸ್ಸು | 47 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ನನದಿವಾಡಿ |

ಸಾಕ್ಷಿಗೆ ಈ ದಿನ ದಿಃ 01-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾಸಾ 1 ನನ್ನ ಅಣ್ಣ. ಚಾಸಾ 9,11 ರಿಂದ 13 ರವರ ಸಹೋದರರು ಆಗಬೇಕು. ಆರೋಪಿತರ ಪರಿಚಯ ಇರುತ್ತದೆ.

ನಾನು ಮತ್ತು ಚಾಸಾ 1 ನನದಿವಾಡಿಯಲ್ಲಿ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತೇವೆ. ನಮ್ಮ ಊರಿನ ರುದ್ರಭೂಮಿಯ ದಾರಿಯ ಕುರಿತು ಊರಿನ ಜನರು ಮತ್ತು ಆರೋಪಿತರ ಮದ್ಯೆ ಜಗಳ ಆಗಿತ್ತು. ದಿಃ18-03-2023 ರಂದು ಬೆಳಗ್ಗೆ 10.30 ಗಂಟೆಗೆ ನಾನು ರಾಶಿ ಮಶೀನ ಬಾಡಿಗೆ ಹೇಳಲು ಯಕ್ಸಂಬಕ್ಕೆ ನನ್ನ ದ್ವಿಚಕ್ರ ವಾಹನದ ನಂಬರ ಕೆ ಎ 23 ಎಸ್ 6881 ನೇದ್ದರ ಮೇಲೆ ಹೋಗುತ್ತಿರುವಾಗ ಯಕ್ಸಂಬಾ-ಚಿಕ್ಕೋಡಿ ರಸ್ತೆಯ ಮೇಲೆ ಬಾಳಾಸಾಬ ವಡ್ಡರ ಇವರ ಜಮೀನು ಹತ್ತಿರ ಶಂಕರ ಯಕ್ಸಂಬೆ, ಅರ್ಜುನ ಯಕ್ಸಂಬೆ, ಪುಂಡಲೀಕ ಯಕ್ಸಂಬೆ ಮತ್ತು ನಿತಿನ್ ಯಕ್ಸಂಬೆ ಇವರು ನನಗೆ ಅಡ್ಡಗಟ್ಟಿ ನಿಲ್ಲಿಸಿ ಏ ಬೋಸಡಿ ಮಗನೆ ನಿ ಊರಾಗ್ ಲೀಡಿರ್ ಆಗಿದ್ದಿ, ಬೋಸಡಿ ಮಗನ ರಂಡಿ ಮಗನ ಅಂತಾ ಬೈದರು. ಅದರಲ್ಲಿ 1 ರಿಂದ 3 ನೇ ಆರೋಪಿತರು ನನಗೆ ಕೈಯಿಂದ ಹೊಡೆದಿರುತ್ತಾರೆ. 4 ನೇ ಆರೋಪಿತನು ಸಳಿಯಿಂದ ನನ್ನ ತಲೆಗೆ ಹೊಡೆದನು. ಆಗ ಚಾಸಾ 9 ರವರು ಸ್ಥಳದಲ್ಲಿ ಬಂದು ನನಗೆ ಹೊಡೆಯುವುದನ್ನು ನೋಡಿ ಚಾಸಾ 1 ಮತ್ತು 11 ರವರಿಗೆ ಕರೆಯಲು ಹೋದಾಗ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಇನ್ನೊಮ್ಮೆ ರುದ್ರಭೂಮಿ ವಿಷಯಕ್ಕೆ ಬಂದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿ ಹೋದರು.

ಚಾಸಾ 9 ರವರು ಚಾಸಾ 1 ಮತ್ತು 11 ರವರಿಗೆ ಕರೆದುಕೊಂಡು ಬಂದರು, ನಾನು ಚಾಸಾ 1 ರವರಿಗೆ ಸದರಿ ಘಟನೆಯನ್ನು ತಿಳಿಸಿದೇನು. ನನ್ನ ತಲೆಯಿಂದ ರಕ್ತ ಬರುತ್ತಿರುವುದನ್ನು ನೋಡಿ ಚಾಸಾ 1 ಮತ್ತು 11 ರವರು ತನ್ನ ದ್ವಿಚಕ್ರವಾಹನದ ಮೇಲೆ ಸದಲಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಉಪಚಾರಕ್ಕಾಗಿ ಚಿಕ್ಕೋಡಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿಂದ ಹೆಚ್ಚಿನ ಉಪಚಾರಕ್ಕಾಗಿ ನಿಪ್ಪಾಣಿಯ ನಿರ್ಮಲ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ದಿಃ28.03.2023 ರಂದು ಆಸ್ಪತ್ರೆಯಿಂದ ನನ್ನನ್ನು ಬಿಡುಗಡೆ ಮಾಡಿರುತ್ತಾರೆ. ನಂತರ ದಿಃ30.03.2023 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಆ ದಿನ ಕೃತ್ಯಕ್ಕೆ ಬಳಸಿರುವ ಸಳಿಯನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ನಾನು 10 ನೇ ತರಗತಿಯ ವರೆಗೆ ಓದಿರುತ್ತೇನೆ. ಸ್ಮಶಾನದ ಕುರಿತು ಊರಿನವರ ಮತ್ತು ಆರೋಪಿತರ ಮಧ್ಯೆ ಜಗಳ ಇರುತ್ತದೆ. ಆ ಜಗಳ ನಮಗೆ ಸಂಬಂಧ ಇರುವುದಿಲ್ಲ. ಸ್ಮಶಾನದ ಕುರಿತು ಊರಿನವರ ಜೊತೆ ಆರೋಪಿತರ ಜಗಳ ಇರುತ್ತದೆ ಎಂದು ನನ್ನ ಹೇಳಿಕೆಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ರುದ್ರಭೂಮಿಯ ದಾರಿಯ ಕುರಿತು ನನಗೆ ಹಾಗೂ ಆರೋಪಿತರ ಮಧ್ಯೆ ವೈಯಕ್ತಿಕ ಜಗಳ ಇರುವುದಿಲ್ಲ. ನಾನು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ "ಇವರಿಗೂ ನಮಗೂ ನನದಿವಾಡಿ ಗ್ರಾಮದಲ್ಲಿನ ರುದ್ರಭೂವಿಯ ಹೋಗುವ ದಾರಿಯ ಸಲುವಾಗಿ ಮೊದಲಿನಿಂದ ತಂಟೆ ತಕರಾರು ನಡೆಯುತ್ತಾ ಬಂದಿರುತ್ತವೆ ಇದರಿಂದ ವೈರತ್ವ ಕೂಡಾ ಬೆಳೆದಿತ್ತು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಡಿ 1 ಎಂದು ಗುರುತಿಸಲಾಯಿತು.

ರುದ್ರಭೂಮಿಯ ದಾರಿಯು ಊರ ಸ್ಥಾಪನೆ ಆದಾಗಿನಿಂದ ಇತ್ತು. ಉಪವಿಭಾಗಾಧಿಕಾರಿ ಚಿಕ್ಕೋಡಿ ಇವರು ಆರ್ ಟಿ ಎಸ್ ನಂಬರ 92/2022-23 ರಲ್ಲಿ ದಿಃ21.08.2023 ರಂದು ನನದಿವಾಡಿಯಲ್ಲಿ ರುದ್ರಭೂಮಿಗೆ ಹೋಗಲು ಯಾವುದೆ ದಾರಿ ಇರುವುದಿಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಕುರಿತು ನ್ಯಾಯಾಲಯದಲ್ಲಿ ದಾವೆ ಚಾಲತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ತೊಂದರೆ ನೀಡಿ ಅವರ ಜಮೀನಿನಿಂದ ರುದ್ರಭೂಮಿಗೆ ಹೋಗಲು

ದಾರಿಯನ್ನು ಸೃಷ್ಟಿಸಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಿಃ18.03.2023 ರಂದು ರಾತ್ರಿ 8.30 ಗಂಟೆಗೆ 4 ನೇ ಆರೋಪಿತನಿಗೆ ನಾವು ಸಳಿಯಿಂದ ತಲೆಗೆ ಮತ್ತು ಬಲಗೈಗೆ ಹೊಡೆದು ಆತನ ಕೊಲೆ ಮಾಡುವ ಪ್ರಯತ್ನ ಮಾಡಿರುತ್ತೇವೆ ಎಂದು ನಮ್ಮ ಮೇಲೆ ಪ್ರಕರಣ ದಾಖಲ ಆಗಿರುತ್ತದೆ ಎಂದರೆ ಸಾಕ್ಷಿಯು ಪ್ರಕರಣ ದಾಖಲ ಆಗಿರುತ್ತದೆ ಆದರೆ ನಾವು 4 ನೇ ಆರೋಪಿತನಿಗೆ ಹೊಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೆ ರುದ್ರಭೂಮಿ ಸಲುವಾಗಿ ದಾರಿಯನ್ನು ಬಿಟ್ಟು ಕೊಟ್ಟಿಲ್ಲ ಎಂದರೆ ಅವರಿಗೆ ಕೊಲ್ಲು ಬಿಡುತ್ತೇವೆ ಎಂದು ಹೊಡೆದಿದಕ್ಕೆ ನಮ್ಮ ಮೇಲೆ ಪ್ರಕರಣ ದಾಖಲ ಆಗಿರುತ್ತದೆ ಎಂದರೆ ಸರಿಯಲ್ಲ.

ಸುವರ್ಣಾ ಮಾರುತಿ ನಾಯಿಕ ಇವರ ವತಿಯಿಂದ ದಿಃ18.03.2023 ರಂದು 9.00 ಗಂಟೆಗೆ ಜಗಳ ಆಗಿರುತ್ತದೆ ಎಂದು ಆರೋಪಿತ ವಿರುದ್ಧ ಕೊಲೆ ಪ್ರಯತ್ನ ಪ್ರಕರಣವನ್ನು ದಾಖಲ ಮಾಡಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ರುದ್ರಭೂಮಿಗೆ ಹೋಗಲು ದಾರಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಘಟನೆಯ ಪೂರ್ವದಲ್ಲಿ ನಾನು ಆರೋಪಿತರಿಗೆ ನೋಡಿರುವುದಿಲ್ಲ. ಯಕ್ಸಂಬಾ ಚಿಕ್ಕೋಡಿ ರಸ್ತೆಯು ಬಹಳ ವಾಹನಗಳು ಮತ್ತು ಜನರು ಓಡಾಡುತ್ತಾರೆ ಎಂದರೆ ಸರಿ. ಅಕ್ಕ ಪಕ್ಕದಲ್ಲಿ ಮನೆಗಳು ಇರುತ್ತವೆ ಎಂದರೆ ಸರಿ. ನನಗೆ ಮತ್ತು ಆರೋಪಿತರಿಗೆ ಮೊದಲು ಯಾವುದೆ ಜಗಳ ಆಗಿರುವುದಿಲ್ಲ, ಸಾಕ್ಷಿ ಮುಂದುವರೆದು ಆರೋಪಿತರು ಒಮ್ಮೆಲೆ ಬಂದು ನನಗೆ ಬೈಯುವುದು ಹೊಡೆಯುವುದು ಮಾಡಿರುತ್ತಾರೆ. ಅಕ್ಕ ಪಕ್ಕದವರು ಯಾರು ಬಂದಿರಲಿಲ್ಲ. ನಾನು ಚಿರಾಡಿ ಅಥವಾ ಜನರಿಂದ ಸಹಾಯ ಪಡೆಯಲು ಪ್ರಯತ್ನ ಮಾಡಿರುವುದಿಲ್ಲ. ಯಾವ ಆರೋಪಿ ನನಗೆ ಎಲ್ಲಿ ಹೊಡೆದಿರುತ್ತಾನೆ ಎನ್ನುವುದು ನಿಖರವಾಗಿ ಹೇಳಲು ಆಗುವುದಿಲ್ಲ. ನನಗೆ ಸಳಿಯಿಂದ ಹೊಡೆದ ನಂತರ ನಾನು ಸ್ವಲ್ಪ ಬೇಸುದ್ದಿಯಾಗಿದ್ದೆ. ನಾನು ನನ್ನ ದ್ವಿಚಕ್ರ ವಾಹನದ ಮೇಲಿಂದ ಕೆಳಗೆ ಬಿದ್ದಿರುತ್ತೇನೆ. ಅಲ್ಲಿಂದ ನನಗೆ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವರೆಗೆ ನಾನು ಬೇಸುದ್ದಿಯಾಗಿರುತ್ತದೆ. ನನ್ನನ್ನು ಆಸ್ಪತ್ರೆಗೆ ಚಾಸಾ 1 ರವರು ಕರೆದುಕೊಂಡು ಹೋಗಿರುತ್ತಾರೆ. ನನ್ನ ಬಟ್ಟೆಗೆ ರಕ್ತ ಹತ್ತಿರುತ್ತದೆ ಸಾಕ್ಷಿ ಮುಂದುವರೆದು ಪೊಲೀಸರು ಅದನ್ನು ಜಪ್ತಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಪೊಲೀಸರು ಸದಲಗಾದ ಸರಕಾರಿ ಆಸ್ಪತ್ರೆಗೆ ಬಂದಿರುವುದಿಲ್ಲ. ಚಾಸಾ 1 ರವರು ವೈದ್ಯರಿಗೆ ಜಗಳ ಆಗಿರುವ ವಿಷಯವನ್ನು ತಿಳಿಸಿದರು. ವೈದ್ಯರು ಹೆಚ್ಚಿ ನ ಉಪಚಾರಕ್ಕಾಗಿ ಚಿಕ್ಕೋಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬರವಣಿಗೆಯಲ್ಲಿ ಸೂಚಿಸಿರುವ ಬಗ್ಗೆ ನನಗೆ

ಗೊತ್ತಿರುವುದಿಲ್ಲ. ಅದೇ ರೀತಿ ಚಿಕ್ಕೋಡಿ ಸರಕಾರಿ ಆಸ್ಪತ್ರೆಯಿಂದ ಹೆಚ್ಚಿನ ಉಪಚಾರಕ್ಕಾಗಿ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವೈದ್ಯರು ಬರವಣಿಗೆಯಲ್ಲಿ ಸೂಚಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಯಾವ ಕಾರಣಕ್ಕೆ ನಿರ್ಮಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಚಾಸಾ 1 ರವರು ತಿಳಿಸಿರುವುದಿಲ್ಲ. ಚಿಕ್ಕೋಡಿ ಸರಕಾರಿ ಆಸ್ಪತ್ರೆಯಲ್ಲಿ ಅಥವಾ ನಿಪ್ಪಾಣಿಯ ನಿರ್ಮಲೆ ಆಸ್ಪತ್ರೆಯಲ್ಲಿ ಪೊಲೀಸರು ಬಂದಿರುವುದಿಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಲು ಚಾಸಾ 1 ರವರು ಕರೆದುಕೊಂಡು ಹೋಗಿರುತ್ತಾರೆ.

ಆರೋಪಿತರು ನನಗೆ ಯಾವುದೇ ತರಹದ ಅಡ್ಡ ಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಕೈಯಿಂದ ಮತ್ತು ಸಳಿಯಿಂದ ಹೊಡಿ ಬಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗದೆ ಇದ್ದರೂ ಸಹ ರುದ್ರಭೂಮಿಗೆ ದಾರಿ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚಿಕ್ಕೋಡಿ

CC No.:-4177/2023
C.W.:-5
P.W.:-5

| | |
|---|---|
| ಸಾಕ್ಷಿದಾರನ ಹೆಸರು | ಸಚೀನ ಖೋತ |
| ತಂದೆಯ ಹೆಸರು | ದತ್ತಾ ಖೋತ |
| ವಯಸ್ಸು | 30 ವರ್ಷ |
| ಕೆಲಸ | ಖಾಸಗಿ ಉದ್ಯೋಗ |
| ವಾಸ | ಸದಲಗಾ |

ಸಾಕ್ಷಿಗೆ ಈ ದಿನ ದಿಃ 01-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾ ಸಾ 4 ರವರ ಪರಿಚಯ ಇರುವುದಿಲ್ಲ.

ಸಾಕ್ಷಿಯು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4ಬಿ ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ನಾನು ಸದಲಗಾ ಪೊಲೀಸ ಠಾಣೆಗೆ ಬೇಟಿ ನೀಡಿದಾಗ ಪೊಲೀಸರು ಸದರಿ ನಿಪಿ 4 ರ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಆರೋಪಿಗಳಿಂದ ಯಾವುದೇ ರಾಡ್ ಜಪ್ತು ಮಾಡಿರುವುದಿಲ್ಲ. ಸಾಕ್ಷಿಗೆ ಮು ಮಾ 1 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಬಿ ಎಂದು ಗುರುತಿಸಲಾಯಿತು. ನಿ ಪಿ 4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಸಳಿಯನ್ನು ಈ ಹಿಂದೆ ನೋಡಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಛಾಯ ಚಿತ್ರ ತೆಗೆಯುವ ಕಾಲಕ್ಕೆ ನಿಂತಿರುತ್ತೇನೆ. ಸದರಿ ಛಾಯ ಚಿತ್ರವನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿ: 07-08-2023 ರಂದು ಪೊಲೀಸರು ನನಗೆ ಮತ್ತು ಚಾಸಾ 4 ರವರಿಗೆ ಆರೋಪಿತರು ಜಗಳ ಮಾಡಿ ಸಳಿಯಿಂದ ಚಾಸಾ 10 ರವರಿಗೆ ಹೊಡೆದಿದ್ದು, ಅದನ್ನು ಜಪ್ತಿ ಮಾಡುವ ಕಾಲಕ್ಕೆ ಪಂಚರಾಗಿ ಹಾಜರಿರಲು ಕೇಳಿರುತ್ತಾರೆ ಎಂದರೆ ಸರಿ ಅಲ್ಲ. ಅದಕ್ಕೆ ನಾವು ಒಪ್ಪಿ ಕೊಂಡು ಪೊಲೀಸ್ ಠಾಣೆಗೆ ಹೋಗಿರುತ್ತೇವೆಂದರೆ ಸರಿ ಅಲ್ಲ. ಮದ್ಯಾಹ್ನ 3-00 ರಿಂದ 4-00 ಗಂಟೆಯವರೆಗೆ ಪೊಲೀಸರು ಸದರಿ ಸಳಿಯನ್ನು ನನ್ನ ಹಾಗೂ ಚಾಸಾ 4 ರವರ ಸಮಕ್ಷಮ ಜಪ್ತಿ ಮಾಡಿ ನಿಪಿ 4 ರಂತೆ ಪಂಚನಾಮೆಯನ್ನು ಜರುಗಿಸಿ ನಿಪಿ 5 ರಂತೆ ಛಾಯ ಚಿತ್ರವನ್ನು ತೆಗೆದಿರುತ್ತಾರೆಂದರೆ ಸರಿ ಅಲ್ಲ. ಪೊಲೀಸರು ನನ್ನ ಸಮಕ್ಷಮ ಮುದ್ದೆ ಮಾಲು 1 ಸಳಿಯನ್ನು ಜಪ್ತಿ ಮಾಡಿ ಅದರ ಮೇಲೆ ಮುದ್ದೆ ಮಾಲು 1ಬಿ ರಂತೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಸಾಕ್ಷಿಯು ನನ್ನ ಸಹಿ ಯಾವ ಕಾರಣಕ್ಕೆ ಪಡೆದು ಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಕ್ಕೋಡಿ